**ದಿನಾಂಕ: 08.04.2025 ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**:ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ.ಎಸ್ ಆರ್ ಪಿ ವಕೀಲರಿಂದ :**

ದಾವಾ ಸರ್ವೆ ನಂಬರ 49/1 ರ ಆಸ್ತಿ ನನ್ನ ತಂದೆಯವರು ರುದ್ರಪ್ಪ ರವರಿಂದ ಖರೀದಿಸಿದ ಆಸ್ತಿಯಾಗಿರುತ್ತದೆ. ದಾವಾ ಸರ್ವೆ ನಂಬರ 92/4 ರ ಆಸ್ತಿ ನನ್ನ ತಾಯಿಯ ತಾಯಿಯವರ ಕಡೆಯಿಂದ ಬಂದ ಆಸ್ತಿಯಾಗಿರುತ್ತದೆ. ನನ್ನ ತಂದೆಯವರು 2014 ರಂದು ಮರಣ ಹೊಂದಿರುತ್ತಾರೆ. ನನ್ನ ತಾಯಿಯವರು 2019 ರಂದು ಮೃತ ಪಟ್ಟಿರುತ್ತಾರೆ. ದಾವಾ ಅನುಸೂಚಿ 1 ರ ಸರ್ವೆ ನಂಬರ 49/1 ರ ಆಸ್ತಿಯನ್ನು ನನ್ನ ತಂದೆಯವರು ತಮ್ಮ ಜೀವಿತಾವಧಿಯಲ್ಲಿ ನನಗೆ ಮತ್ತು ನನ್ನ ಅಣ್ಣ ದಸ್ತಗಿರಿಸಾಬರವರಿಗೆ ಬಿಟ್ಟುಕೊಟ್ಟಿದ್ದರು ಎಂದರೆ ಸಾಕ್ಷಿಯು ಸರಕಾರದ ಸವಲತ್ತು ಪಡೆಯಲು ಬಿಟ್ಟು ಕೊಟ್ಟಿದ್ದರು ಎಂದು ಸ್ವತಃ ನುಡಿಯುತ್ತಾರೆ. ಆ ಆಸ್ತಿಯನ್ನು ಎಷ್ಟನೇ ಇಸವಿಯಂದು ಬಿಟ್ಟು ಕೊಟ್ಟರು ಎಂಬುದು ನನಗೆ ಗೊತ್ತಿಲ್ಲ. ನನ್ನ ತಂದೆಯವರು ಆ ಆಸ್ತಿಯನ್ನು ಬಿಟ್ಟು ಕೊಟ್ಟ ದಿನದಿಂದ ಬ್ಯಾಂಕ್ ನಲ್ಲಿ ಸಾಲ ಸೌಲಭ್ಯಗಳನ್ನು ಪಡೆದುಕೊಂಡು ವಹಿವಾಟು ಮಾಡುತ್ತಾ ಬಂದಿರುತ್ತೇನೆ ಎಂರೆ ಸರಿಯಲ್ಲ. ಆ ಜಮೀನಿನ ಮೇಲೆ ಸಾಲ ಪಡೆಯುವ ಸಂದರ್ಭದಲ್ಲಿ ನಾವುಗಳು ಇಬ್ಬರೇ ಸಹಿ ಮಾಡಿ ಪಡೆದುಕೊಳ್ಳುತ್ತಿದ್ದೆವು ಎಂದರೆ ಸರಿ. ದಾವಾ ಸರ್ವೆ ನಂಬರ 92/4 ರ ಜಮೀನಿನ್ನು ನನ್ನ ತಾಯಿ ಜೀವಂತ ಇದ್ದಾಗಲೇ ನನಗೆ ನನ್ನ ಅಣ್ಣ ದಸ್ತಗಿರಿಸಾಬರವರಿಗೆ ಬಿಟ್ಟುಕೊಟ್ಟಿದ್ದರು ಎಂದರೆ ಸಾಕ್ಷಿಯು ಸರಕಾರದಿಂದ ಸೌಲಭ್ಯಗಳನ್ನು ಪಡೆದುಕೊಳ್ಳುವ ಉದ್ದೇಶದಿಂದ ಬಿಟ್ಟುಕೊಟ್ಟಿದ್ದರು ಎಂದು ಸ್ವತಃ ನುಡಿಯುತ್ತಾರೆ. ಆ ಆಸ್ತಿಯಲ್ಲಿ ನಾನು ಮತ್ತು ನನ್ನ ಅಣ್ಣ ಸಾಲ ಪಡೆದ ಸಂಬಂಧ ದಾಖಲೆಗಳಲ್ಲಿ ಬೋಜ ನಮೂದು ಆಗಿದೆ ಎಂದದರೆ ಸರಿ. ಆ ಆಸ್ತಿಗಳನ್ನು ಬಿಟ್ಟುಕೊಟ್ಟ ದಿನದಿಂದಲೂ ಸಹ ಆ ಆಸ್ತಿಗಳ ಮಾಲೀಕತ್ವದ ಕಾಲಂನಲ್ಲಿ ನನ್ನ ಮತ್ತು ನನ್ನ ಅಣ್ಣ ಹೆಸರು ನಮೂದು ಆಗಿರುತ್ತದೆ ಎಂದರೆ ಸರಿ. ಈ ಬಗ್ಗೆ ಡ ನಂಬರ 2053 ಮತ್ತು 2668 ಮಂಜೂರು ಆಗಿರುತ್ತದೆ ಎಂದರೆ ನನಗೆ ನೆನಪಿಲ್ಲ. ಆ ಆಸ್ತಿಗಳನ್ನು ಬಿಟ್ಟು ಕೊಟ್ಟ ದಿನದಿಂದಲೂ ನಾನು ಮತ್ತು ನನ್ನ ಅಣ್ಣ ದಸ್ತಗಿರಿಸಾಬರವರಿಗೆ ವಹಿವಾಟು ಮಾಡುತ್ತಾರೆ ಬಂದಿರುತ್ತೇವೆ ಎಂದರೆ ಸಾಕ್ಷಿಯು ಎಲ್ಲರೂ ಕೂಡಿಯೇ ವಹಿವಾಟು ಮಾಡುತ್ತಿದ್ದೆವು ಎಂದು ಸ್ವತಃ ನುಡಿಯುತ್ತಾರೆ.

2. 1 ನೇ ವಾದಿಯನ್ನು ಎಷ್ಟು ವರ್ಷಗಳ ಹಿಂದ ಮದುವೆ ಮಾಡಿಕೊಡಲಾಗಿತ್ತು ಎಂಬುದು ನನಗೆ ನೆನಪಿಲ್ಲ. ನನ್ನ ತಂದೆ ತಾಯಿಯವರೇ ಅವರುಗಳಿಗೆ ಮದುವೆ ಮಾಡಿ ಕೊಟ್ಟಿರುತ್ತಾರೆ. 1 ನೇ ವಾದಿಗೆ ಮದುವೆ ಮಾಡಿ ಕೊಡುವ ಸಂದರ್ಭದಲ್ಲಿ ನನಗೆ 12 ವರ್ಷ ವಯಸ್ಸಾಗಿತ್ತು. 2 ಮತ್ತು 3 ನೇ ವಾದಿಯರ ಮದುವೆಯನ್ನು ನಾವೇ ಮಾಡಿ ಕೊಟ್ಟಿರುತ್ತೇವೆ. ದಾವಾ ಆಸ್ತಿಗಳಲ್ಲಿ ನಾನು ಮತ್ತು ವಾದಿಯರೇ ಕೂಡಿ ವಹಿವಾಟು ಮಾಡುತ್ತಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರು ಬೇರೆ ಊರಿನಲ್ಲಿ ವಾಸವಾಗಿದ್ದರು ಸಹ ನನ್ನ ಅಣ್ಣ ದಸ್ತಗಿರಿಸಾಬರವರ ಹಮೀನಿನ್ನು ಎತ್ತಿಹಾಕಿಕೊಳ್ಳುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ 1 ರ ಆಸ್ತಿಯಲ್ಲಿ ಗೋವಿನ ಜೋಳ ಬೆಳೆಯುತ್ತಿದ್ದೇನೆ. ದಾವಾ ಅನುಸೂಚಿ 2 ರ ಆಸ್ತಿಯಲ್ಲಿ ಅಡಿಕೆ ತೋಟ ಇದೆ. ನಮ್ಮ ಕುಟುಂಬದಲ್ಲಿ ಈಗಾಗಲೇ ವಾಟ್ನಿ ಆಗಿದ್ದರೂ ಸಹ, ವಾಟ್ನಿ ಆಗಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

: **ಮರುವಿಚಾರಣೆ** : **ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ

ಎಂದು ಒಪ್ಪಿರುತ್ತಾರೆ.

**Sd/-**

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಹಾನಗಲ್

ಸಾಕ್ಷಿದಾರರ ಸಹಿ